'ನಮ್ಮ ಸೈಟು ಹೇಗಿತ್ತೋ ಹಾಗೆ ಆಗ್ಬೇಕು. ನಿಮ್ಮ ಗಾರೆ, ಜಲ್ಲಿ ಕಲ್ಲು, ಎಂ. ಸ್ಯಾಂಡು, ಕಲ್ಲು ಚಪ್ಪಡಿಗಳು, ಶೆಡ್ಡು... ಎಲ್ಲ ಖಾಲಿಯಾಗ್ಬೇಕು' ಎಂದ ಗೀತಾ ಸರ್ಕಾರ್ ತನ್ನ ಕಟ್ಟಡದ ಕಾಮಗಾರಿ ವೀಕ್ಷಿಸಲು ಹಾಕಿಸಿಕೊಂಡಿದ್ದ ಚೇರಿನಲ್ಲೇ ಕುಳಿತು ದಬಾಯಿಸಿದಳು. ಜೂನಿಯರ್ ಅವಳ ಪಕ್ಕ ನಿಂತೇ ಮಾತಾಡಿದ.

'ಏ... ನಿಮ್ಮನ್ನು ನೋಡಿದ ಕೂಡ್ಲೇ ಈಯಮ್ಮ ಬಿಡೋವ್ಹಲ್ಲ ಅಂತ ಗೊತ್ತಾಗೋಯ್ತು ಬಿಡಿ ಮೇಡಂ... ಅದಕ್ಯಾಕೆ ಟೆನ್ಷನ್ ತಗೋತೀರ' ಅಂತ ನಿರಾಯಾಸವಾಗಿ ನಕ್ಕ ಜೂನಿಯರ್ ಹಿಂದೆಯೇ ತನ್ನ ಹಣೆಯ ಮೇಲಿದ್ದ ಬೆವರು ಮಣಿಗಳನ್ನು ಒರೆಸಿಕೊಂಡ.

ಈ ನಡುವೆ ತಮ್ಮ ಕೆಲಸ ಶುರುಮಾಡಲು ಸಮಯ ಸಾಲದ ಗೀತಾಳ ಕಾಂಪೌಂಡಿನ ಕೆಲಸಗಾರರು 'ನಾಳೆ ಬರುತ್ತೇವೆ' ಎಂದು ಹಿಂತಿರುಗಿದ್ದರು. ಸ್ವಲ್ಪ ಸಮಯದವರೆಗೆ ಉರಿಬಿಸಿಲಿನಲ್ಲಿ ಜೆಸಿಬಿಯ ಕೆಲಸ ನೋಡಿದ ಗಂಡ- ಹೆಂಡತಿ ಇನ್ನಾದರೂ ಕೆಲಸ ನಡೆಯುತ್ತದೆ ಎಂದು ನಂಬಿ ಹಿಂತಿರುಗಿದರು.

'ಅಲ್ಲ ಗೀತಾ, ಅವರ ವಸ್ತುನ ಹೊರಗೆ ಹಾಕೋಕೆ ಜೆಸಿಬಿಯವರನ್ನು ಕರೆಸಿ ನಾವ್ಯಾಕೆ ದುಡ್ಡು ಕೊಡಬೇಕು? ನೀನು ಫೋನ್ ಮಾಡೋಕೆ ಹೋದಾಗ ನಂಗೆ ಜೀವಾನೇ ಕೈಗೆ ಬಂದಿತ್ತು ಗೊತ್ತಾ?' ಅಂತ ಕೇಳಿದ ಪ್ರಶ್ನೆಗೆ ಗೀತಾ ಕೇವಲ ಮುಗುಳ್ನಕ್ಕಳು. ಮೂರ್ತಿಗೆ ಅದು ಅರ್ಥವಾಗಲಿಲ್ಲ.

6

ಮೂರ್ತಿ ನೇಮಿಸಿದ್ದ ಕೆಲಸಗಾರರು ಮರುದಿನ ಬೆಳಿಗ್ಗೆಯೇ ಬಂದರು. ಆದರೆ, ಗೀತಾಳಿಗೂ ಆಶ್ಚರ್ಯವಾಗುವಂತೆ ಎಲ್ಲ ಸಾಮಾನುಗಳು ಇನ್ನೂ ಸೈಟಿನಲ್ಲೇ ಇದ್ದವು.

ಇತ್ತ ಗಂಡ-ಹೆಂಡತಿ ಜಾಗ ಬಿಡುತ್ತಿದ್ದಂತೆ, ಸಾಮಾನುಗಳನ್ನು ಅತ್ತಿಂದಿತ್ತ ಮಾಡಿದ್ದ ಜೆಸಿಬಿಯನ್ನು ಜೂನಿಯರ್ ಸರ್ಕಾರ್ ಹಿಂತಿರುಗಿ ಕಳಿಸಿಬಿಟ್ಟಿದ್ದ. 'ಇಲಿಗೆ ಪ್ರಾಣ ಸಂಕಟ, ಬೆಕ್ಕಿಗೆ ಚೆಲ್ಲಾಟ' ಎನ್ನುವಂತೆ ಅವರನ್ನು ಸರ್ಕಾರ್ ಆಟವಾಡಿಸುತ್ತಿದ್ದ ವಿಚಾರ ಈಗ ನಿಚ್ಚಳವಾಗಿತ್ತು.

ಅಲ್ಲಿ ಸರ್ಕಾರ್‌ನ ಕಡೆಯವರು ಯಾರೂ ಇಲ್ಲದ ಕಾರಣ, ಮೂರ್ತಿ ಧೈರ್ಯವಾಗಿ ಒಂದಷ್ಟು ಕೂಗಾಡಿದ. ಮನೆ ಕಟ್ಟುವ ಕೆಲಸದಲ್ಲಿ ತೊಡಗಿದ್ದ ಉತ್ತರ ಪ್ರದೇಶದ ಕೆಲಸಗಾರರಿಗೆ ಅವನ ಅರಚಾಟ ಯಾಕೆಂದು ಗೊತ್ತಾಗಲಿಲ್ಲ. ಅವರು ತಮ್ಮ ಪಾಡಿಗೆ ತಾವು ಕೆಲಸ ಮುಂದುವರೆಸಿದರು. ಆದರೆ, ಮೂರ್ತಿಯ ಕಿರುಚಾಟ ಕೇಳಿದ ಅಕ್ಕ-ಪಕ್ಕದ ಮನೆಯವರು, ಆ ಬೀದಿಯ ಬಹುತೇಕರು 'ಇವತ್ತಿನ ಎಪಿಸೋಡಿನಲ್ಲಿ ಏನಾಗುತ್ತಿದೆ?' ಎಂದು ನೋಡಲು ಹೊರಬಂದರು. ಮೂರ್ತಿ ಬಂದವರಿಗೆಲ್ಲ ಖುಷಿಯಾಗಿ ವಿವರಿಸಿ ಹೇಳತೊಡಗಿದ.

ಕೆಲವರು 'ಅವನ್ಯಾಕೆ ಹೆದರ್ತಾನೆ ಸರ್? ಇಲ್ಲಿರೋ ಮೆಟೀರಿಯಲ್ಸ್‌ಗೆ ಅವನು ದುಡ್ಡು ಕೊಟ್ಟಿದ್ರೆ ತಾನೇ? ರಸ್ತೆ, ಫುಟ್ಪಾತು ಅಂತ ಕಟ್ಟಿಸೋಕೆ ಸರ್ಕಾರ ಕೊಟ್ಟಿದ್ದನ್ನೆ ಇಲ್ಲಿಗೆ ಹೊಡೆಸ್ಕೊಂಡಿದ್ದಾನೆ. ನೋಡಿ, ಆ ಕಲ್ಚಪ್ಪಡಿ ರಾಶೀ ಬಿದ್ದಿದೆಯಲ್ಲ? ಅದು ಹೊಸ ಫುಟ್ಪಾತ್ ಮಾಡ್ತೀನಿ ಅಂತ ಹಳೆದನ್ನು ಕಿತ್ತಾಗ ಸಿಕ್ಕಿರೋದು. ಒಂದೇ ಕೂಗಿಗೆ ಹತ್ತು ಜೆಸಿಬಿ ತರಿಸಿ ಅರ್ಧ ಗಂಟೇಲಿ ನಿಮ್ಮ ಸೈಟ್ ಕ್ಲಿಯರ್ ಮಾಡಿಸೋ ತಾಕತ್ತಿದೆ ಅವ್ನಿಗೆ... ಸುಮ್ಮನೆ ಆಟ ಆಡಿಸ್ತಿದ್ದಾನೆ. ಇನ್ನು ನೀವು ಕೋರ್ಟು ಅಂತ ಹೋದ್ರೆ ಅದೆಷ್ಟು ವರ್ಷಗಳ ಕಾಲ ಹಿಡಿಯುತ್ತೋ' ಅಂದರು.

ಅವರು ಹೇಳಿದಂತೆ ಕೋರ್ಟಿನ ಮೊದಲ ಹಂತಕ್ಕೆ ತಲುಪಲು ಇಪ್ಪತ್ತು ಸಾವಿರಕ್ಕೂ ಹೆಚ್ಚು ಹಣ ಬೇಕಿತ್ತು.

ಇನ್ನು ಕೆಲವರು 'ಅಯ್ಯೋ... ಬಾಡಿಗೆ ಕೊಡೋಕೆ ಕಷ್ಟಸತಾ ಇದ್ರೂ, ಇರೋ ಬರೋವ್ರ ಹತ್ರೆಲ್ಲ ಜಗಳ ಆಡ್ಕೊಂಡಿದ್ದಾನೆ. ಮುಂದೆ ಅಕ್ಕ-ಪಕ್ಕ ಇರೋರು ಅನ್ನೋದನ್ನೂ ಯೋಚಿಸ್ತಿಲ್ಲ. ಮಳೇ ಸುರಿದ್ರೆ ಇವನ ಕಟ್ಟಡದ ಮೇಲಿಂದ, ನೀರೆಲ್ಲ ಅಕ್ಕ ಪಕ್ಕದ ಮನೆ ಕಾಂಪೌಂಡ್ ಒಳಗೇ ಸುರಿಯೋ ಹಾಗೆ ಕಟ್ಟಿದಾನೆ ನೋಡಿ. ಸೆಟ್ ಬ್ಯಾಕ್ ಅಂತ ಜಾಗನೇ ಬಿಟ್ಟಿಲ್ಲ. ಮೊದಲ್ನೇ ಮಹಡಿ, ಕಟ್ಟಡದ ತಳಪಾಯಕ್ಕಿಂತ ಎರಡಡಿ ಹೊರಕ್ಕೆ ಬಂದಿದೆ ನೋಡಿ, ಯಾವ್ ಸೀಮೆ ಇಂಜಿನಿಯರ್ರೋ ಏನೋ... ಗಾಳಿಲೂ ಜಾಗ ಲಪಟಾಯಿಸ್ತಾವ್ನೆ, ನಿಮ್ ಸೈಟಿಂದೂ' ಅಂತ ತೋರಿಸಿ ಹೋದರು.

ಅದು ನಿಜವಾಗಿತ್ತು. ಅದನ್ನೆಲ್ಲ ಗೀತಾ ವಿಡಿಯೊ ಮಾಡಿಕೊಂಡಳು ಫೋಟೊ ಕ್ಲಿಕ್ಕಿಸಿಕೊಂಡಳು.

ಸರ್ಕಾರ್‌ಗೆ ಊರ ತುಂಬಾ ಸೈಟುಗಳು, ಮನೆಗಳು ಇದ್ದವು. ಅದರ ಮೇಲೆ ಇವಿನ್ನೊಂದು ಹತ್ತು ಮನೆಗಳ